**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-22-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ಪ್ರತಿವಾದಿ ಪರ ಶ್ರೀ. ಸಿ.ಕೆ.ಎಂ ವಕೀಲರಿಂದ :**

13. ನನ್ನ ಮದುವೆ 1975 ರಲ್ಲಿ ಆಗಿರುತ್ತದೆ. ನನಗೆ ಮದುವೆಯಾಗುವ ಮೊದಲೇ ನಿ.ಪಿ.1 ಕ್ರಯ ಪತ್ರ ಆಗಿರುತ್ತದೆ. ನನ್ನ ಮಾವನವರು ದಿನಾಂಕ 24.03.1975 ರಂದು ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಆದರೆ ಅವರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ಹೆಸರು ನನಗೆ ಸರಿಯಾಗಿ ನೆನಪಾಗುತ್ತಿಲ್ಲ. ನಿ.ಪಿ.1 ಕ್ರಯ ಪತ್ರದಲ್ಲಿ ಶಾಮಯ್ಯ ರೆಡ್ಡಿ ಎಂದು ಇದ್ದು ನನ್ನ ವಾದ ಪತ್ರದಲ್ಲಿ ಶಾಮಣ್ಣ ರೆಡ್ಡಿ ಎಂದು ಇದ್ದು ಅದು ಎರಡೂ ಒಬ್ಬರದ್ದೇ ಹೆಸರಾಗಿರುತ್ತದೆ. ಎರಡೂ ಹೆಸರುಗಳು ಒಬ್ಬರದ್ದೇ ಎಂದು ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದು ಅದು ಸರಿಯಾಗಿ ನನ್ನ ಗಮನಕ್ಕೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ.

14. ಶಾಮಣ್ಣ ರೆಡ್ಡಿಯವರಿಗೆ 5 ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳಿದ್ದು ಅವರ ಹೆಸರುಗಳು ಭಾಗ್ಯಮ್ಮ, ಪ್ರಕಾಶ್, ನಾರಾಯಣ ಸ್ವಾಮಿ, ಮಂಜುನಾಥ್, ಆನಂದ್ ಮತ್ತು ಅಶೋಕ್. ಶಾಮಣ್ಣ ರೆಡ್ಡಿಯವರ 5 ಗಂಡು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

15. ನಿ.ಪಿ.1 ಕ್ರಯ ಪತ್ರದಲ್ಲಿ ಒಟ್ಟು ಆಸ್ತಿ 2 ಎಕರೆ 5 ಗುಂಟೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನನ್ನ ಸಾಕ್ಷಿ ವಿಚಾರಣಾ ಪ್ರಮಾಣ ಪತ್ರದ ಖಂಡಿಕೆ 2 ರಲ್ಲಿ 2 ಎಕರೆ 19 ಗುಂಟೆ ಎಂದು ಬರೆಯಲಾಗಿದೆ ಎಂದರೆ ಅದನ್ನು ತಪ್ಪಾಗಿ ಬರೆಯಲಾಗಿದೆ ಎಂದು ನುಡಿಯುತ್ತಾರೆ.

16. ಸರ್ವೇ ನಂ.56/10 ರಲ್ಲಿ 2 ಎಕರೆ 9 ಗುಂಟೆ ಮಾರಾಟವಾಗಿದೆ ಎಂದರೆ ಸರಿಯಲ್ಲ. ನಿ.ಪಿ.2 ರಲ್ಲಿ ತೋರಿಸಿದ ಸ್ವತ್ತು ಹೇಗೆ ಬಂದಿದೆ ಎಂದು ನಾನು ನನ್ನ ವಾದ ಪತ್ರದಾಲ್ಲಾಗಲೀ ಮುಖ್ಯ ಸಾಕ್ಷಿ ವಿಚಾರಣೆಯಲ್ಲಾಗಲೀ ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಸ್ವತ್ತು ಈ ದಾವೆಗೆ ಸೇರಿಲ್ಲ ಎಂದು ನುಡಿಯುತ್ತಾರೆ. ಆ ಸ್ವತ್ತು ಈ ದಾವೆಗೆ ಸಂಬಂಧವಿಲ್ಲದಿದ್ದರೂ ಸಹ ನಿ.ಪಿ.2 ನ್ನು ಹಾಜರು ಪಡಿಸಿದ್ದೇನೆ ಎಂದರೆ ಸಾಕ್ಷಿಯು ಆ ಸ್ವತ್ತಿನಲ್ಲಿ ನಾವು ತಿರುಗಾಡುತ್ತೇವೆ ಎಂದು ತೋರಿಸಲು ಆ ದಾಖಲೆ ಹಾಕಿದ್ದೇನೆ

ಎಂದು ನುಡಿಯುತ್ತಾರೆ. ನಿ.ಪಿ.2 ರ ಸ್ವತ್ತಿಗೆ ದಕ್ಷಿಣದಿಂದ ರಸ್ತೆ ಇದೆ ಎಂದರೆ ಅದು ಆ ಸಂದರ್ಭದಲ್ಲಿ ಇರಲಿಲ್ಲ ಈಗ ನಿರ್ಮಾಣವಾಗಿದೆ ಎಂದು ನುಡಿಯುತ್ತಾರೆ. ಈಗ ನಮ್ಮ ಸ್ವತ್ತಿನ ದಕ್ಷಿಣದಿಂದ ತಿರುಗಾಡಲು ರಸ್ತೆ ಇದೆ ಎಂದರೆ ಈಗ ಇದೆ ಎಂದು ನುಡಿಯುತ್ತಾರೆ.

17. ನಿ.ಪಿ.10 ನನ್ನ ಪತ್ನಿ ಈಗಲೂ ಸಹ ಆರೋಗ್ಯಕರವಾಗಿ ಚೆನ್ನಾಗಿದ್ದಾರೆ ಎಂದರೆ ಸರಿಯಲ್ಲ. ಆಕೆಗೆ ಆರೋಗ್ಯ ಸರಿಯಿಲ್ಲ ಎಂಬ ಬಗ್ಗೆ ವೈಧ್ಯಕೀಯ ಪ್ರಮಾಣ ಪತ್ರ ಸಲ್ಲಿಸಿದ್ದೀರಾ ಎಂದರೆ ಅದನ್ನು ಹಾಕಬೇಕೆಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆಕೆ ಆರೋಗ್ಯಕರವಾಗಿ ಈಗಲೂ ಚೆನ್ನಾಗಿದ್ದಾರೆ ನಾನು ನಿ.ಪಿ.10 ಸುಳ್ಳಾಗಿ ತಯಾರಿಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.10 ಪ್ರಮಾಣ ಪತ್ರದಲ್ಲಿ ನನ್ನ ಹೆಂಡತಿಗೆ ಆರೋಗ್ಯ ಸರಿಯಿಲ್ಲ ಆಕೆ ನಡೆದಾಡಲು ಆಗುವುದಿಲ್ಲ ಎಂದು ಬರೆದಿಲ್ಲ ಎಂದರೆ ಅದನ್ನು ಬರೆಸುವ ಜ್ಞಾನ ನನಗೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿ,ಪಿ.10 ರಲ್ಲಿ ಯಾವ ಕೇಸಿಗೆ ಸಂಬಂಧಿಸಿ ಕೊಟ್ಟಿದಾ್ದರೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಅದರಲ್ಲಿ ನನಗೆ ಪವರ್ ಆಫ್ ಅಟಾರ್ನಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.10 ರಲ್ಲಿ ತಪಸೀಲನ್ನು ಬರೆದಿದ್ದಾರೆ ಎಂದರೆ ಸರಿ. ಅದರಲ್ಲಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಾವೀಗ ವಾಸವಿರುವ ಜಾಗ ಉತ್ತರಕ್ಕೆ ಸರ್ವೇ ನಂ.56 ರ ನಾವು ಮಾರಿದ ಜಾಗ ದಕ್ಷಿಣಕ್ಕೆ ಮೈಕೋ ಲೇಔಟ್ ನವರ ನಿವೇಶನಗಳನ್ನು ನಮೂದಿಸಿದ್ದಾರೆ.

18. ಸರ್ವೇ ನಂ.56/10 ರಲ್ಲಿ 80*14 ಫೀಟ್ ಎಂಬ ಜಾಗವು ಉಳಿಕೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ. ಅದು ಯಾವ ದಾಖಲೆ ಎಂದು ಕೇಳಿ ನ್ಯಾಯಾಲಯದ ಕಡತವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಹುಡುಕಿ ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ.

13. ಶಾಮಣ್ಣ ರೆಡ್ಡಿಯವರು ನನ್ನ ಹೆಂಡತಿ ಭಾಗ್ಯಮ್ಮರವರಿಗೆ ಸರ್ವೇ ನಂ.56/10 ರಲ್ಲಿ ನಾನು ಹೇಳುವಂತಹ ತೋರಿಸಿರುವ ಉಳಿಕೆ ಜಾಗ 10*100 ಅಥವಾ 4*100 ಕ್ಕೆ ಸಂಬಂಧಿಸಿ ಕ್ರಯ ಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ನಮ್ಮಲ್ಲಿ ಇಲ್ಲ. ಅಂತಹ ಯಾವುದೇ ಉಳಿಕ ಜಾಗ ಯಾವುದೇ ಇಲ್ಲದಿದ್ದುದ್ದರಿಂದಲೇ ಅಂತಹ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಕ್ರಯ ಪತ್ರ ಇದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಯಾವುದೇ ದಾಖಲೆಗಳಲ್ಲಿ ಉಳಿಕೆ ಜಾಗ 10*100 ಅಥವಾ 4*100 ಕ್ಕೆ ಸಂಬಂಧಿಸಿ ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ನಾನು ಇದೆ ಎಂದು ಸುಳ್ಳು ದಾವೆ ಹೂಡಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಿ.ಪಿ.1, 2 ಮತ್ತು 10 ನ್ನು ಹೊರತು ಪಡಿಸಿ ಎಲ್ಲಾ ಉಳಿದ ದಾಖಲೆಗಳು ಪ್ರತಿವಾದಿಗೆ ಸಂಬಂಧಿಸಿದ್ದು ಎಂದರೆ ಸರಿ.

15. 1988 ರಲ್ಲಿ 69 ಎಕರೆ 13 ಗುಂಟೆ ಸ್ವತ್ತಿಗೆ ಬಿಡಿಎರವರು ಮೈಕೊ ಶ್ರಮಜೀವಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತಕ್ಕೆ ಭೂ ಸ್ವಾಧೀನ ಮಾಡಿ ಲೇಔಟ್ ಮಾಡಲು ಅವರಿಗೆ ನೀಡಿದ ವಿಚಾರ ನನಗೆ ಗೊತ್ತಿಲ್ಲ. ಅದೇ ರೀತಿ 1988 ರಲ್ಲಿ 69 ಎಕರೆ 13 ಗುಂಟೆ ಅಕ್ಕಪಕ್ಕದಲ್ಲಿರುವ ಸ್ವತ್ತುಗಳಿಗೂ ಕೂಡ ಅಧಿಸೂಚನೆ ಹೊರಡಿಸಿತ್ತು ಎಂದರೆ ನನಗೆ ಗೊತ್ತಿಲ್ಲ. 69 ಎಕರೆ 13 ಗುಂಟೆ ಅಕ್ಕಪಕ್ಕದಲ್ಲಿರುವ ಸ್ವತ್ತುಗಳಲ್ಲಿ ನನ್ನ ಸ್ವತ್ತು ಬರದೇ ಇದ್ದುದ್ದರಿಂದ ನನಗೆ ನೋಟೀಸನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. 69 ಎಕರೆ 13 ಗುಂಟೆಯಲ್ಲಿ ಮೈಕೋ ಲೇಔಟ್ ಎಂದು ಬಡಾವಣೆ ಮಾಡಿ ಅದರ ಸಂಘದ ಸದಸ್ಯರಿಗೆ ಹಂಚಿಕೆ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿಯವರ ಸ್ವತ್ತು ಸುಜಾತಾರವರಿಗೆ ಹಂಚಿಕೆಯಾಗಿತ್ತು ಎಂದರೆ ಸರಿ. ಸುಜಾತಾರವರು ಪ್ರತಿವಾದಿಯವರಿಗೆ ಆ ಸ್ವತ್ತನ್ನು ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅಲ್ಲಿಂದ ಇಲ್ಲಿಯವರೆಗೆ ಪ್ರತಿವಾದಿಯವರೇ ಸ್ವಾಧೀನಾನುಭೋಗದಲ್ಲಿದ್ದಾರೆ ಎಂದರೆ ಸರಿ.

16. ಈ ದಾವೆಯಲ್ಲಿ ಮೈಕೋ ಸೊಸೈಟಿಯನ್ನಾಗಲೀ ಅದರೆ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿಯನ್ನಾಗಲೀ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಆ ಬಗ್ಗೆ ನನಗೆ ಅರಿವಿಲ್ಲ ಎಂದು ನುಡಿಯುತ್ತಾರೆ. ನಾನು ಬಿಎಂಟಿಎಫ್ ರವರಿಗೆ ಕಾನೂನು ಬಾಹಿರವಾಗಿ ಈ ದಾಖಲೆಗಳನ್ನು ಸೃಷ್ಟಿಸಿ ಪ್ರತಿವಾದಿ ಸ್ವಾಧೀನಾನುಭೋಗದಲ್ಲಿದ್ದಾರೆ

ಎಂದು ದೂರನ್ನು ನೀಡಿದ್ದೆ ಎಂದು ಸರಿ. ಆ ದೂರಿನನ್ವಯ ಅವರಿಗೆ ನೋಟೀಸು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ದೂರಲ್ಲಿ ನನ್ನನ್ನು ವಿಚಾರಣೆ ಮಾಡಿಲ್ಲ ಆ ದೂರಿಗೆ ಆದೇಶ ಮಾಡಿದ್ದಾರೆ ಮತ್ತು ಅದೇ ಈ ಆದೇಶ ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಪರಾಂಬರಿಸಿ ಸರಿ ಎಂದು ನುಡಿಯುತ್ತಾರೆ. ಸಾಕ್ಷಿ ಅದನ್ನು ಒಪ್ಪಿದ್ದರಿಂದ **ನಿ.ಡಿ.**1 ಎಂದು ಗುರುತಿಸಲಾಯಿತು. ಅದರಲ್ಲಿ ಯಾವುದೇ ಕಾನುನು ಬಾಹಿರ ದಾಖಲೆಗಳಾಗಿಲ್ಲ ಮತ್ತು ಪ್ರತಿವಾದಿಯವರ ದಾಖಲೆಗಳು ಸರಿಯಾಗಿವೆ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. 30*50 ರಲ್ಲಿ ಪ್ರತಿವಾದಿಯವರು ಸೈಟ್ ನಂ.454 ಕಾನೂನು ಬದ್ಧ ಸ್ವಾಧೀನದಲ್ಲಿ ಇದ್ದಾರೆ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಈ ಆದೇಶದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ.

(ಪೂರ್ವಾಹ್ನದ ಸಮಯ ಮುಗಿದಿದ್ದರಿಂದ ಮುಂದುವರಿದ ಪಾಟಿ ಸವಾಲನ್ನು ಅಪರಾಹ್ನಕ್ಕೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-22-02-2025 ರ ಅಪರಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ಸಿ.ಕೆ.ಎಂ ವಕೀಲರಿಂದ ಃ**

17. ಶಾಮಯ್ಯ ರೆಡ್ಡಿಯವರು ವಾದಿಯವರ ತಂದೆಯೆಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಆ ಬಗ್ಗೆ ಯಾವುದಾದರೂ ದಾಖಲೆ ಸಿಕ್ಕಿದರೆ ಹಾಜರು ಪಡಿಸಬಲ್ಲೆ.

18. ಸರ್ವೇ ನಂ.56/10 ರಲ್ಲಿ ನಾನು ಹೇಳುವಂತಹ 4*100 ಚದರ ಅಡಿ ಸ್ವತ್ತು ವಾದಿಯವರಿಗೆ ಹೋಗಿದೆ ಎಂದು ತೋರಿಸಲು ನನ್ನಲ್ಲಿ ದಾಖಲೆ ಇದೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ. ಶಾಮಯ್ಯ ರೆಡ್ಡಿಯವರ ಕುಟುಂಬಕ್ಕೆ ಸಂಬಂಧಿಸಿದ ವಂಶ ವೃಕ್ಷವನ್ನು ಅಧಿಕೃತ ಪ್ರಾಧಿಕಾರದಿಂದ ಪಡೆದು ಹಾಜರು ಪಡಿಸಿಲ್ಲ ಎಂದರೆ ಸರಿ.

19. 4*100 ಕ್ಕೆ ಸಂಬಂಧಿಸಿ ಆಕರ ಬಂದವಾಗಲೀ, ಮ್ಯುಟೇಷನ್ ಪ್ರತಿಯಾಗಲೀ, ಟಿಪ್ಪಣಿಯಾಗಲೀ ನನ್ನ ಬಳಿ ಇಲ್ಲ ನನ್ನ ಮಾವನ ಬಳಿ ಇರಬಹುದು. ನನ್ನ ಮಾವ ಈಗ ಮೃತಪಟ್ಟಿರುತ್ತಾರೆ. ಸೈಟ್ ನಂ.854 ಪ್ರತಿವಾದಿಯವರ ಸ್ವತ್ತಿಗೆ 4*100 ಚದರ ಅಡಿಗೆ ಸಂಬಂಧಿಸಿದೆ ಎಂದು ತೋರಿಸಲು ಕ್ರಯ ಪತ್ರವನ್ನು ಬಿಟ್ಟು ಬೇರೆ ಯಾವುದೇ ದಾಖಲೆ ಇರುವುದಿಲ್ಲ. ಕ್ರಯ ಪತ್ರದಲ್ಲೂ ಅದರ ಬಗ್ಗೆ ನಮೂದು ಇಲ್ಲ ಎಂದರೆ ಸರಿ.

20. ಸರ್ವೇ ನಂ.56/3, 56/2, 56/5 ಬಿ, 56/7, 56/8 ಈ ಎಲ್ಲಾ ಸ್ವತ್ತುಗಳು ಸಹ ಮೈಕೋ ಸಂಘದವರ ಅಧೀನ ಮತ್ತು ಸ್ವಾಧೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರ ಸ್ವತ್ತು ಮೇಲೆ ನಮೂದಿಸಿದ ಸರ್ವೇ ನಂಬರುಗಳಲ್ಲಿ ಒಳಗೊಂಡ ಸ್ವತ್ತಾಗಿದ್ದು ಈವರೆಗೂ ಪ್ರತಿವಾದಿಯವರೇ ಸ್ವಾಧೀನಾನುಭೋಗದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಳತೆಯಲ್ಲಿ ವ್ಯತ್ಯಾಸ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

21. ಸರ್ವೇ ನಂ.56/10 ಮತ್ತು ಸೈಟ್ ನಂ.854 ನನ್ನ ಹೆಂಡತಿಯ ಸ್ವತ್ತು ಎಂದು ಹೇಳಲು ಎಲ್ಲಿಯೂ ಘೋಷಣೆ ಮಾಡುವಂತೆ ಯಾವುದೇ ದಾವೆಯನ್ನು ಸಲ್ಲಿಸಿಲ್ಲ.

22. ಸರ್ವೇ ನಂ.56/3, 56/2, 56/5 ಬಿ, 56/7, 56/8 ಈ ಎಲ್ಲಾ ಸ್ವತ್ತುಗಳು ಕೃಷಿಯೇತರ ಜಮೀನು ಎಂದು 1992 ರಲ್ಲಿ ಭೂ ಪರಿವರ್ತನೆಗೊಂಡಿದೆ ಎಂದರೆ ಆಗಿರಬಹುದು. ನಾನು ಹೇಳುವಂತಹ ಸ್ವತ್ತು ಮೈಕೋ ಸೊಸೈಟಿಯ ಸರ್ವೇ ನಂಬರಿನ ಒಳಗಡೆ ಬರುತ್ತದೆ ಎಂದರೆ ಸರಿಯಲ್ಲ.

23. ನಾನು ಹೇಳುವಂತಹ ನಿ.ಪಿ.2 ರ ಸ್ವತ್ತಿನ ಉತ್ತರಕ್ಕೂ ಒಂದು ದಾರಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದು ನುಡಿಯುತ್ತಾರೆ. ದಕ್ಷಿಣದಲ್ಲಿರುವ ರಸ್ತೆ ಡಾಮರು ರಸ್ತೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಈಗ ಹಾಕಿದ್ದು ಎಂದು ನುಡಿಯುತ್ತಾರೆ. ನಾವು ನಿ.ಪಿ.2 ರ ಸ್ವತ್ತಿಗೆ ಇದೇ

ಡಾಮರು ರಸ್ತೆಯನ್ನು ಉಪಯೋಗಿಸುತ್ತಿದ್ದೇವೆ ಎಂದರೆ ಸಾರ್ವಜನಿಕರು ಎಲ್ಲರೂ ಓಡಾಡುತ್ತಿದ್ದಾರೆ ನಾನೂ ಸಹ ಓಡಾಡುತ್ತಿದ್ದೇನೆ ಎಂದು ನುಡಿಯುತಾರೆ.

24. ನಿವೇಶನ ಸಂಖ್ಯೆ 854 ರ ಉತ್ತರಕ್ಕೆ ತುಂಬಾ ಮನೆಗಳಾಗಿವೆ ಎಂದರೆ ಸರಿ. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಿ ಅದರಲ್ಲಿ ಪ್ರತಿವಾದಿಗಳ ಮನೆಗಳು ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಈಗ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಮನೆಯನ್ನು ಅವರು ಖರೀದಿ ಮಾಡಿದಾಗಿನಿಂದ ಈವರೆಗೂ ವಾಸಿಸುತ್ತಿದ್ದಾರೆ ಎಂದರೆ ಅವರು ಅದನ್ನು ಬಾಡಿಗೆಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ.

25. ದಿನಾಂಕ 17.08.2022 ರಲ್ಲಿ ಪ್ರತಿವಾದಿಯವರು ನನ್ನ ಮೇಲೆ ಮತ್ತು ನನ್ನ ಹೆಂಡತಿಯ ಮೇಲೆ ಒಂದು ದೂರು ನೀಡಿದ್ದರು ಎಂದರೆ ಸರಿ. ಪೊಲೀಸರು ನಮ್ಮನ್ನು ಕರೆದು ನಮಗೆ ತಂಟೆ ತಕರಾರು ಮಾಡಬಾರದು ಎಂದು ಎಚ್ಚರಿಕೆ ನೀಡಿ ಕಳಿಸಿದ್ದಾರೆ ಎಂದರೆ ಸರಿ.

26. ವಾದ ಪತ್ರದ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ನಾನು ಮತ್ತು ನನ್ನ ಮಗಳು ಇಬ್ಬರೂ ಸೇರಿ ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಸೊಸೈಟಿಯವರು ನೀಡಿದ ನಿವೇಶನ ನಂ.854, 30*50 ಸ್ವತ್ತಿನಲ್ಲಿಯೇ ಮನೆಯನ್ನು ಕಟ್ಟಿ ಪ್ರತಿವಾದಿಗಳು ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u> ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**